ಬರಬೇಕು. ಅವರಿಗೆ incentive ಆಗಿ ಎರಡೆರಡು ಎಕರೆಗೆ 5,000 ರೂಪಾಯಿಯಂತೆ 10,000 ರೂಪಾಯಿ ಕೊಡುತ್ತೇನೆಂದು ಬಜೆಟ್, ಆಯ-ವ್ಯಯದಲ್ಲಿ ಘೋಷಣೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಇಷ್ಟೇ ನಿಮಗೆ ಹೇಳುವುದಕ್ಕೆ ಇಚ್ಛಿಪಡುವುದು, Karnataka Silk Marketing Board ಮುಖಾಂತರ ರೇಷ್ಮೆ ಖರೀದಿ ಮಾಡುವುದಕ್ಕೆ ಕ್ರಮ ಕೈಗೊಳ್ಳುವುದು, ಕೇಂದ್ರ ಸರ್ಕಾರವೂ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ರೀತಿ ಸಹಾಯಹಸ್ತ ನೀಡಬೇಕು ಇದನ್ನು ವಿನಂತಿ ಮಾಡುವುದು, ಕೇಂದ್ರ ಸರ್ಕಾರ custom duty ಕಡಿಮೆ ಮಾಡಬಾರದು. ಇದರಿಂದ ರೇಷ್ಮೆ ಬೆಳೆಗಾರರು ಬೀದಿಪಾಲಾಗುತ್ತಾರೆ ಎನ್ನುವ ಅರಿವು ನನಗೆ ಇದೆ. ಈ ಬಗ್ಗೆ ಚರ್ಚೆ ಮಾಡೋಣ. ಕೇಂದ್ರಕ್ಕೂ ನಿಯೋಗ ತೆಗೆದುಕೊಂಡು ಹೋಗೋಣ, ಅವರ ಮನವೊಲಿಸೋಣ. ರೇಷ್ಮೆ ಬೆಳೆಗಾರರನ್ನು ಉಳಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಆ ದಿಕ್ಕಿನಲ್ಲಿ ನೀವು ಏನು ಸಲಹೆ ಕೊಟ್ಟರೂ ನಾನು ಸ್ವೀಕಾರ ಮಾಡಲು ಸಿದ್ಧನಿದ್ದೇನೆ. ರೇಷ್ಮೆ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಶಕ್ತಿಮೀರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

4. ಗಮನ ಸೆಳೆಯುವ ಸೂಚನೆ:

(ಅ) ವಿಷಯ: ತುಮಕೂರು ಜಿಲ್ಲೆ, ಶಿರಾ ನಗರಸಭೆ ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಬೀಡಿ ಕಾರ್ಮಿಕರು, ಕಡು ಬಡವರು ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದು, ಈ ಪ್ರದೇಶವನ್ನು 1984ರ ಕೌನ್ಸಿಲ್ ನಿರ್ಣಯದಂತೆ ನಿವೇಶನಗಳಿಗಾಗಿ ಹಂಚಿಕೆ ಮಾಡಲು ಕನಿಷ್ಟ ದರದಂತೆ ಹಣ ಪಾವತಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ತುಮಕುರು ಜಿಲ್ಲೆ, ಶಿರಾ ನಗರಸಭೆ ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಬೀಡಿ

ಕಾರ್ಮಿಕರು, ಕಡು ಬಡವರು ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದು, ಈ ಪ್ರದೇಶವನ್ನು 1984ರ ಕೌನ್ಸಿಲ್ ನಿರ್ಣಯದಂತೆ ನಿವೇಶನಗಳಾಗಿ ಹಂಚಿಕೆ ಮಾಡಲು ಕನಿಷ್ಟ ದರದಂತೆ ಹಣ ಪಾವತಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ, ಶಿರಾ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ರಿ.ಸ. ನಂ. 5ರಲ್ಲಿ 19 ಎಕರೆ 23 ಗುಂಟೆ ಹಾಗೂ ಸ. ನಂ. 6ರಲ್ಲಿ 23 ಎಕರೆ 21 ಗುಂಟೆ ಸರ್ಕಾರಿ ಜಮೀನು ಇದ್ದು, ಸದರಿ ಜಮೀನು ಶಿರಾ ಪಟ್ಟಣಕ್ಕೆ ಹೊಂದಿಕೊಂಡಂತೆ ಇರುತ್ತದೆ. ಈ ಜಮೀನಿನಲ್ಲಿ ತೀರ ಕಡು ಬಡವರು, ಬೀಡಿ ಕಾರ್ಮಿಕರು ಮತ್ತು ಇತರರು ಅನಧಿಕೃತವಾಗಿ ಗುಡಿಸಲು ಮತ್ತು ಮನೆಗಳನ್ನು ಕಟ್ಟಿಕೊಂಡು ಸುಮಾರು ವರ್ಷಗಳ ಹಿಂದಿನಿಂದಲೂ ವಾಸವಿರುತ್ತಾರೆ.

ಸರ್ಕಾರದ ಮಂಜೂರಾತಿಯ ನಿರೀಕ್ಷಣೆಯ ಮೇರೆಗೆ ಸದರಿ ಜಮೀನುಗಳನ್ನು ಶಿರಾ ಪುರಸಭೆಗೆ ಹಸ್ತಾಂತರಿಸಲು ತುಮಕೂರು ಜಿಲ್ಲಾಧಿಕಾರಿಗಳು ಇವರ ಅಧಿಕೃತ ಜ್ಞಾಪನಾ ಸಂಖ್ಯೆ: ಎಲ್‌ಎನ್‌ಡಿ/ಸಿ.ಆರ್./ಎಂ/52/94-95, ದಿನಾಂಕ: 21.2.1998ರಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಿ, ಹಸ್ತಾಂತರ ಆದೇಶ ಹೊರಡಿಸಿರುತ್ತಾರೆ. ಈ ಎರಡು ಸರ್ವೆ ನಂಬರುಗಳು ಸರ್ಕಾರಿ ಗೋಮಾಳ ಎಂಬುದಾಗಿ ವರ್ಗೀಕೃತಗೊಂಡಿರುತ್ತದೆ. ಈ ಜಮೀನುಗಳಲ್ಲಿ ಅನಧಿಕೃತ ಗುಡಿಸಲುಗಳನ್ನು ನಿರ್ಮಿಸಿಕೊಂಡಿರುತ್ತಾರೆ ಹಾಗೂ ಇದೇ ಸರ್ವೆ ನಂಬರುಗಳಲ್ಲಿ ಸರ್ಕಾರಿ ಕಛೇರಿಗಳು, ಇನ್ನಿತರ ಸಾರ್ವಜನಿಕ ಉದ್ದೇಗಳನ್ನೊಳಗೊಂಡ ಕಟ್ಟಡಗಳು ಇರುತ್ತವೆ. ಸದರಿ ಸರ್ವೆ ನಂಬರ್‌ಗಳಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಸಕ್ರಮಗೊಳಿಸುವ ಸಂಬಂಧ ಶಿರಾ ಪುರಸಭೆಯವರು ಸ.ನಂ. 5ರಲ್ಲಿ

6 ಎಕರೆ 14' ಗುಂಟೆಗೆ ಹಾಗೂ ಸ.ನಂ. 6ರಲ್ಲಿ 9 ಎಕರೆ 7 ಗುಂಟೆಗೆ ಒಟ್ಟು ವಿಸ್ತೀರ್ಣ 15 ಎಕರೆ 21 ಗುಂಟೆಗೆ ರೂ. 10,25,000/–ಗಳನ್ನು ಪಾವತಿಸಿರುತ್ತಾರೆ. ಸದರಿ 15 ಎಕರೆ 21 ಗುಂಟೆ ಜಮೀನನ್ನು ನಿಯಮಾನುಸಾರ ಪರಿಶೀಲಿಸಿ ಶಿರಾ ಪುರಸಭೆಗೆ ಮಂಜೂರಾತಿ ನೀಡಿ ಹಸ್ತಾಂತರ ಮಾಡುವುದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಸಚಿವರ ಉತ್ತರವನ್ನು ನೋಡಿ ನಗಬೇಕೋ, ಅಳಬೇಕೋ ಎಂದು ಏನೂ ಗೊತ್ತಾಗುತ್ತಿಲ್ಲ. ಈಗ ತಾವು ಒಂದನ್ನು ಒಪ್ಪಿದ್ದೀರಿ. ಸರ್ವೆ ನಂಬರ್ 5 ಮತ್ತು 6ರಲ್ಲಿ ಈಗಾಗಲೇ ಅನಧಿಕೃತವಾಗಿ ಬಹಳ ವರ್ಷಗಳಿಂದ ಕೂಡ ಕಟ್ಟಡಗಳು ಯಥೇಚ್ಛವಾಗಿ ಬಂದಿದೆ. ಅಲ್ಲಿ ನೋಡುವುದಕ್ಕೆ ಒಂದು ಅಡಿ ಜಾಗ ಕೂಡ ಇಲ್ಲ. ಅಲ್ಲೆಲ್ಲಾ ವಾಸ ಮಾಡುತ್ತಿರತಕ್ಕವರು ಅತ್ಯಂತ ಕಡು ಬಡವರು, ಬೀಡಿ ಕಾರ್ಮಿಕರಾಗಿದ್ದಾರೆ, Scheduled casteಗೆ ಸೇರಿಸತಕ್ಕಂತಹ ಜನರು ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವಾಗ correspondence ಆಗಿತ್ತು ಅಂದರೆ ಕಳೆದ ಹತ್ತು ವರ್ಷದಿಂದ ಸರ್ಕಾರದಲ್ಲಿಯೇ ಪೆಂಡಿಂಗ್ ಇರತಕ್ಕದ್ದು. 1998ರಿಂದಲೂ ಕೂಡ correspondence ನಲ್ಲಿಯೇ ಇದ್ದಾರೆ. ನನಗೆ ಅನಿಸುತ್ತದೆ, ಬಡವರಿಗೇನಾದರೂ ಒಂದು ಸೈಟ್ ಕೊಡಬೇಕು ಎನ್ನುವ ಪ್ರಶ್ನೆ ಬಂದಾಗ ಏಕೆ ಫೈಲುಗಳು ಇಲಾಖೆಯಿಂದ ಇಲಾಖೆಗೆ ಓಡಾಡುತ್ತದೋ ನನಗಂತೂ ಅರ್ಥ ಆಗುವುದಿಲ್ಲ. ದಯಮಾಡಿ ತಾವು ಬಡವರ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಿ. ಇಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶ ಸಹ ಸರಿ ಇಲ್ಲ. ಸರ್ವೆ ನಂಬರ್ 5ರಲ್ಲಿ ಬರತಕ್ಕದ್ದು, 21.03, ಸರ್ವೆ ನಂಬರ್ 6ರಲ್ಲಿ ಬರತಕ್ಕದ್ದು 23.21, ಒಟ್ಟು 44.24 ಎಕರೆ, ಇಷ್ಟು ಜಮೀನಿನಲ್ಲಿ ಅನಧಿಕೃತ ಕಟ್ಟಡಗಳು ಇವೆ. ಇದು ತಾವು ಹೇಳುತ್ತಿರುವುದು, ತಮಗೆ ಕೊಟ್ಟಿರತಕ್ಕಂತಹ ವರದಿ ಏನಾಗಿದೆ ಅಂದರೆ 1984, 1990ರ ಹಿಂದಿನ ವರದಿಯನ್ನು ಇವತ್ತು ಕೊಡುತ್ತಿದ್ದಾರೆ. ಆದರೆ ಇವತ್ತಿನ ವಸ್ತು ಸ್ಥಿತಿ ಏನೆಂದರೆ ಸಂಪೂರ್ಣವಾಗಿ ಇವತ್ತು ಅನಧಿಕೃತ

ಕಟ್ಟಡಗಳು ಬಂದಿದೆ. ಎಲ್ಲಾ ರೀತಿಯ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಇವತ್ತು ಅವರಿಗೆ electricity ಇದೆ, ನೀರು ಕೊಡುತ್ತಿದ್ದಾರೆ, ಎಲ್ಲವನ್ನೂ ಕೊಡಲಾಗುತ್ತಿದೆ, ಆದರೆ ಕಂದಾಯ ಮಾತ್ರ ಯಾರೂ ಕೊಡುತ್ತಿಲ್ಲ. ಏಕೆಂದರೆ ಅವರುಗಳು ಯಾರೂ ಕೂಡ ಓನರ್‌ಗಳು ಆಗಿಲ್ಲ. ಅವರೂ ಕೂಡ ಇವತ್ತು ಮುನಿಸಿಪಾಲಿಟಿಗೆ ಸುಮಾರು 11 ರಿಂದ 12 ಲಕ್ಷ ದುಡ್ಡು ಕೊಟ್ಟಿದ್ದಾರೆ. ಇದು ಒಂದಕ್ಕೊಂದು ಅರ್ಥ ಆಗುತ್ತಿಲ್ಲ. ದಯಮಾಡಿ ತಾವು ಬಡವರ ದೃಷ್ಟಿ ಇಟ್ಟುಕೊಂಡು, ಅದು ಮುನಿಸಿಪಾಲಿಟಿ ಅಥವಾ revenue ಎನ್ನತಕ್ಕದ್ದಕ್ಕಿಂತ ಹೆಚ್ಚಾಗಿ ಬಡವರ ದೃಷ್ಟಿಯಿಂದ ಇವತ್ತು ಸಂಪೂರ್ಣವಾಗಿ ಅದನ್ನು ವರ್ಗಾವಣೆ ಮಾಡಿಕೊಡಬೇಕು. ಇನ್ನೊಂದು ತಮಾಷೆ ಎಂದರೆ ಮಂತ್ರಿಗಳೆ...

ಅಧ್ಯಕ್ಷರು: ಇದು ಗಮನ ಸೆಳೆಯುವ ವಿಚಾರ.

ಶ್ರೀ ಟಿ.ಬಿ. ಜಯಚಂದ್ರ: ನಾನು clarification ಕೇಳುತ್ತಿರುವುದು clarification ಕೇಳದೇ ಹೋದರೆ ಏನೂ ಗೊತ್ತಾಗುವುದಿಲ್ಲ ಅಧ್ಯಕ್ಷರೆ,

ಅಧ್ಯಕ್ಷರು: ಉತ್ತರ ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಹಸ್ತಾಂತರ ಮಾಡಿದ್ದೇವೆಂದು ಹೇಳುತ್ತಾರೆ. ಸರ್ಕಾರಕ್ಕೆ 1998ರಲ್ಲಿ ವರದಿ ಕೊಟ್ಟಿದ್ದಾರೆ. ಇಲ್ಲಿಯವರೆಗೂ ಪಹಣಿಯಲ್ಲಿ ಅದು ಗೋಮಾಳ ಎಂತಲೇ ಬರುತ್ತಿದೆ. ಇದು ನನಗೆ ಅರ್ಥ ಆಗುತ್ತಿಲ್ಲ. ಎಲ್ಲೂ ಕೂಡ revenue records upto date ಆಗಿಲ್ಲ. ದಯಮಾಡಿ ಮಾನವೀಯತೆಯ ದೃಷ್ಟಿಯಿಂದ ಸರ್ವೆ ನಂಬರ್ 5 ಮತ್ತು 6ರಲ್ಲಿ ಬರತಕ್ಕಂತಹ ಸಂಪರ್ಣ ಜಾಗ ಮುನಿಸಿಪಲ್ ವ್ಯಾಪ್ತಿಯಲ್ಲಿ ಬರುವುದರಿಂದ ಸಂಪೂರ್ಣವಾಗಿ ಅದನ್ನು ವರ್ಗಾವಣೆ ಮಾಡಿ, ಮುನಿಸಿಪಾಲಿಟಿ ಮುಖೇನ ನಿವೇಶನಗಳನ್ನು ಕೊಡತಕ್ಕಂತಹ ಕೆಲಸವನ್ನು ಮಾಡಬೇಕು. ಆಶ್ವಾಸನೆಯನ್ನು ತಾವು ಕೊಡಬೇಕು. ಅಷ್ಟೇ ಪ್ರಮಾಣದಲ್ಲಿ ಕೂಡ ಅದನ್ನು ಹ್ಯಾಂಡ್ ಓವರ್ ಮಾಡಿ records ಕೂಡ update ಆಗಬೇಕು.

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರ ಅವರು ಬಹಳ ಹಿರಿಯ ಸದಸ್ಯರು, ಅವರು ಪ್ರಾರಂಭದಲ್ಲಿ ನಗಬೇಕೋ, ಅಳಬೇಕೋ ಎಂದು ಹೇಳಿದರು. ನಾನು ಕೂಡ ಅದೇ ವಿಚಾರವನ್ನು ಹೇಳಬೇಕಾಗುತ್ತದೆ. ಏಕೆಂದರೆ 1998ರಲ್ಲಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದು. 1998 ರಿಂದ ನಮ್ಮ ಸರ್ಕಾರ ಬರುವವರೆಗೆ ಯಾವ ಸರ್ಕಾರ ಇತ್ತು ಎಂಬ ವಿಚಾರ ಮಾನ್ಯ ಜಯಚಂದ್ರ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರು ಇದನ್ನು ಫಾಲೋ ಅಪ್ ಮಾಡಿದ್ದರೆ, ಇಲ್ಲಿಯವರೆಗೆ ಅವರು ಗಮನ ಸೆಳೆಯುವ ಪರಿಸ್ಥಿತಿ ಬರುತ್ತಿರಲಿಲ್ಲ. ಆದರೂ ಕೂಡ ಮಾನ್ಯ ಜಯಚಂದ್ರ ಅವರು ಬಡವರ ಬಗ್ಗೆ, ಬೀಡಿ ಕಾರ್ಮಿಕರ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳಿದ್ದಾರೆ. ಖಂಡಿತಾ ನಮ್ಮ ಸರ್ಕಾರ ಕಾಳಜಿ ವಹಿಸುತ್ತದೆ. ಅದು ಏನು ಇದೆ, ಕಡತವನ್ನು ತರಿಸಿಕೊಳ್ಳುತ್ತೇನೆ. ನಾನು ಅಧಿಕಾರಿಗಳಿಗೆ ಈಗಾಗಲೇ ಹೇಳಿದ್ದೇನೆ. ಆ ಕಡತ ಎಲ್ಲಿದೆ ಎಂದು ನೋಡಿ ಖಂಡಿತಾ ಅದನ್ನು ಪರಿಷ್ಕಾರ ಮಾಡಿ ಕೊಡುತ್ತೇನೆ. ಆಮೇಲೆ ನೀವು ಹೇಳಿದ ಹಾಗೆ ಸರ್ವೆ ನಂಬರ್ 5ರಲ್ಲಿ 19 ಎಕರೆ, 23 ಗುಂಟೆ ಇರುವುದು ನಿಜ. ಆದರೆ ನಾನು ಉತ್ತರದಲ್ಲಿ ಹೇಳಿದ ಹಾಗೆ ಆಸ್ಪತ್ರೆ ಮತ್ತು ಸಿಬ್ಬಂದಿಗಳದ್ದು ಆಗಿರಬಹುದು, ಖಬರ್‌ಸ್ತಾನ ಆಗಿರಬಹುದು. ತೋಟಗಾರಿಕಾ ಕಛೇರಿ ಆಗಿರಬಹುದು, ಆಲ್ ಅಮೀನ್ ಉರ್ದು ಶಾಲೆ ಆಗಿರಬಹುದು. ಈ ರೀತಿ ರಸ್ತೆ, ಹಳ್ಳ ಇಂಥವೆಲ್ಲಾ ಇದ್ದಾವೆ. ಅವೆಲ್ಲಾ ಸೇರಿಸಿಕೊಂಡು ತಾವು 42 ಎಕರೆ ಎಂದು ಹೇಳಿದ್ದೀರಿ. ತಮ್ಮ ಕಳಕಳಿ ಏನು ಇದೆ, ಅದಕ್ಕೆ ಖಂಡಿತ ನಮ್ಮ ಸಹಮತಿ ಇದೆ. ಅದನ್ನು ಪರಿಶೀಲಿಸಿ, ತಕ್ಷಣ ಅದಕ್ಕೆ ಪರಿಷ್ಕಾರ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ನಾನು constituency ಯಲ್ಲಿ ಎರಡೂವರೆ ವರ್ಷ ಇರಲಿಲ್ಲ, ಬಹುಶಃ ಹಳೇ ಕ್ಷೇತ್ರದಲ್ಲಿ ಇದ್ದಿದ್ದರೆ ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ನಾನು ಪ್ರಶ್ನೆ ಕೇಳುವ ಪ್ರಸಂಗ ಬರುತ್ತಿರಲಿಲ್ಲ. ದಯಮಾಡಿ ಮತ್ತೆ ಇದು ಡಿಲೇ ಆಗುವುದು ಬೇಡ. ನನಗೆ ಕನಿಷ್ಠ

8 ದಿವಸಗಳ ಅವಧಿಯಲ್ಲಿ ಮಾಡಿಕೊಡುತ್ತೇನೆಂದು ಹೇಳಿದರೆ ಒಳ್ಳೆಯದು. ಏಕೆ ನಾನು ಈ ಮಾತನ್ನು ಹೇಳುತ್ತೇನೆ ಎಂದರೆ ಇಲಾಖೆಯಿಂದ ಇಲಾಖೆಗೆ ಈ ಫೈಲ್ ಓಡಾಡುವುದೇ ಕೆಲಸ ಆಗಿದೆ. ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಹೋಗಬೇಕಾದರೆ ಎಲ್ಲಾ ಫೈಲ್‌ಗಳೇ ಕಳೆದು ಹೋಗಿವೆ. ದುಡ್ಡು ಕಟ್ಟಿರುವಂತಹ ರಸೀದಿಗಳು ಸಹ ಕಳೆದು ಹೋಗಿರುವಂತಹ ಪರಿಸ್ಥಿತಿ ಇದೆ. ದಯಮಾಡಿ ಏಕೆಂದರೆ ಇಬ್ಬರು ಮಂತ್ರಿಗಳೂ ಇಲ್ಲೇ ಇದ್ದೀರಿ. ದಯಮಾಡಿ 8–10 ದಿವಸದಲ್ಲಿ ಇದನ್ನು ಮಾಡಿಕೊಡುತ್ತೇವೆಂದು ಹೇಳಿದರೆ ಬಹಳ ಒಳ್ಳೆಯದು. ಮಾನ್ಯ ನಗರಾಭಿವೃದ್ಧಿ ಸಚಿವರು ಇದ್ದಾರೆ.

ಶ್ರಿ ಜಿ. ಕರುಣಾಕರ ರೆಡ್ಡಿ: ಅದರ ಬಗ್ಗೆ ಪರಿಶೀಲನೆ ಮಾಡಿ ಅದನ್ನು ಮಾಡಿಕೊಡುತ್ತೇನೆಂದು ಹೇಳುತ್ತೇನೆ.

(ಆ) ವಿಷಯ: ಮಂಗಳೂರು ವಿಧಾನಸಭೆ ಮತ ಕ್ಷೇತ್ರದಲ್ಲಿ ಕುಂದಾಪುರ – ತಾಳಪಾಡಿವರೆಗೆ ರಾಷ್ಟ್ರೀಯ ಹೆದ್ದಾರಿ 17ರ ಸುಮಾರು 90 ಕಿ.ಮೀ. ಚತುಷ್ಪಥ ರಸ್ತೆಗಾಗಿ ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿ ಕೊಳ್ಳುತ್ತಿರುವುದರಿಂದ ಸಾರ್ವಜನಿಕರಲ್ಲಿ ಅಸಮಾಧಾನ ಉಂಟಾಗಿರುವ ಬಗ್ಗೆ.

ಶ್ರೀ ಯು.ಟಿ. ಖಾದರ್ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಧಾನಸಭೆ ಮತ ಕ್ಷೇತ್ರದಲ್ಲಿ ಕುಂದಾಪುರ–ತಾಳಪಾಡಿವರೆಗೆ ರಾಷ್ಟ್ರೀಯ ಹೆದ್ದಾರಿ 17ರ ಸುಮಾರು 90 ಕಿ.ಮೀ. ಚತುಷ್ಪಥ ರಸ್ತೆಗಾಗಿ ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವುದರಿಂದ ಸಾರ್ವಜನಿಕರಲ್ಲಿ ಅಸಮಾಧಾನ ಉಂಟಾಗಿರುವ ಬಗ್ಗೆ ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ 17ನ್ನು ಆರು ಪಥದ ರಸ್ತೆಯನ್ನಾಗಿ ವಿಸ್ತರಿಸುವ